(4)
ದೂರವಾಣಿ/ಫ್ಯಾಕ್ಸ್: 080-2793 4470
URL: www.hoskote-pa.in

# ಹೊಸಕೋಟೆ ಯೋಜನಾ ಪ್ರಾಧಿಕಾರ

ನಂ. 2241, ಶ್ರೀ ಜಯಚಾಮರಾಜೇಂದ್ರ ವೃತ್ತ, ಕೆ.ಆರ್. ರಸ್ತೆ, ಹೊಸಕೋಟೆ-562 114, ಬೆಂಗಳೂರು (ಗ್ರಾ) ಜಿಲ್ಲೆ

ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ/19/2011-12 ದಿನಾಂಕ: 26.04.2012

## ಮಂಜೂರಾತಿ ಆದೇಶ

ವಿಷಯ: ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಕೋಟೂರು ಗ್ರಾಮದ ಸ.ನಂ. 61/1 ರಲ್ಲಿ 03 ಎಕರೆ 04 ಗುಂಟೆ ಜಮೀನಿನಲ್ಲಿ ವಸತಿ ವಿನ್ಯಾಸ ಅನುಮೋದನೆಯನ್ನು ನೀಡುವ ಬಗ್ಗೆ.

ಉಲ್ಲೇಖ: 1. ಅರ್ಜಿದಾರರ ಮನವಿ ದಿನಾಂಕ: 03.02.2012, 09.04.2012 ಮತ್ತು 21.04.2012.
2. ದಿನಾಂಕ: 29.03.2012 ರಂದು ನಡೆದ ಪ್ರಾಧಿಕಾರದ 41ನೇ ಸಭೆಯ ವಿಷಯ ಸಂಖ್ಯೆ 05 ರ ನಿರ್ಣಯ.
3. ಪ್ರಾಧಿಕಾರಕ್ಕೆ ಹಣ ಪಾವತಿಸಿದ ಬಗ್ಗೆ ಡಿ.ಡಿ. ನಂ. 301278, ದಿನಾಂಕ: 09.04.2012, ರೂ. 5,63,413/-.
4. ಅರ್ಜಿದಾರರ ಪರಿತ್ಯಾಜನಾ ಪತ್ರದ ದಿನಾಂಕ: 21.04.2012.

ಪ್ರಸ್ತಾವನೆ

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ ವಿನ್ಯಾಸ ಅನುಮೋದನೆ ಕೋರಿ ಸಲ್ಲಿಸಲಾದ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು, ಉಲ್ಲೇಖ (2)ರ ಹೊಸಕೋಟೆ ಯೋಜನಾ ಪ್ರಾಧಿಕಾರದ ಸಭೆಯಲ್ಲಿ ಸದರೀ ವಸತಿ ವಿನ್ಯಾಸಕ್ಕೆ ಅನುಮೋದನೆ ನೀಡಲು ಅಂಗೀಕರಿಸಲಾಗಿದೆ. ಉಲ್ಲೇಖ (3) ರಂತೆ ಸಂಬಂಧಿಸಿದ ಶುಲ್ಕವನ್ನು ಅರ್ಜಿದಾರರು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಸದರೀ ಜಮೀನನ್ನು ವ್ಯವಸಾಯೇತರ ವಸತಿ ಉದ್ದೇಶಕ್ಕಾಗಿ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಇವರು ಭೂ ಪರಿವರ್ತನೆ ಮಾಡಿ ಅಧಿಕೃತ ಜ್ಞಾಪನಾ ಪತ್ರ ಹೊರಡಿಸಿರುತ್ತಾರೆ. ಈ ವಿನ್ಯಾಸದಲ್ಲಿ ವಸತಿಗಾಗಿ 6524.24 ಚ. ಮೀ. (ಶೇ 52.01), ವಾಣಿಜ್ಯಕ್ಕಾಗಿ 374.94 ಚ. ಮೀ. (ಶೇ 2.98), ಉದ್ಯಾನವನ ಮತ್ತು ಬಯಲು ಜಾಗಕ್ಕಾಗಿ 1,299.61 ಚ. ಮೀ. (ಶೇ 10.36), ನಾಗರೀಕ ಸೌಲಭ್ಯಕ್ಕಾಗಿ 628.96 ಚ.ಮೀ. (ಶೇ 5.01) ಮತ್ತು ರಸ್ತೆ ಹಾಗೂ ಪಾದಚಾರಿ ಮಾರ್ಗಗಳಿಗಾಗಿ 3,717.39 ಚ. ಮೀ. (ಶೇ 29.64) ವಿಸ್ತೀರ್ಣವನ್ನು ನಿಗಧಿಪಡಿಸಲಾಗಿದೆ. ವಿನ್ಯಾಸದಲ್ಲಿನ 9.14X12.19ಮೀ ಅಳತೆಯ 23 ನಿವೇಶನಗಳು, 9X15ಮೀ. ಅಳತೆಯ 16 ನಿವೇಶನಗಳು ಮತ್ತು 11 ಸಂಖ್ಯೆ ಅನಿಯತ ನಿವೇಶನಗಳು ಸೇರಿದಂತೆ ಒಟ್ಟು 50 ವಸತಿ ನಿವೇಶನಗಳನ್ನು ಹಾಗೂ 02 ವಾಣಿಜ್ಯ ನಿವೇಶನ ಪ್ರಸ್ತಾವಿಸಲಾಗಿದೆ.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ವಸತಿ ವಿನ್ಯಾಸ ಅನುಮೋದನೆ ನೀಡುವ ಸಂಬಂಧ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

## ಆದೇಶ ಸಂಖ್ಯೆ: ಹೊ.ಯೋ.ಪ್ರಾ/ಎಲ್.ಎ.ಓ/19/2011-12, ದಿನಾಂಕ : 26.04.2012

ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಕೋಟೂರು ಗ್ರಾಮದ ಸ.ನಂ. 61/1 ರಲ್ಲಿ 03 ಎಕರೆ 04 ಗುಂಟೆ ಜಮೀನಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2) ರನ್ವಯ ವಸತಿ ಉದ್ದೇಶದ ವಿನ್ಯಾಸವನ್ನು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಕಾರ್ಯರೂಪಕ್ಕೆ ತರಲು ಅನುಮೋದನೆ ನೀಡಲಾಗಿದೆ.

ಷರತ್ತುಗಳು:

1. ಈಗ ನೀಡಿರುವ ವಿನ್ಯಾಸ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ ಎರಡು ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸ ಅಭಿವೃದ್ಧಿ ಕಾರ್ಯ ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
2. ಅನುಮೋದಿತ ರೂಪರೇಖಾ ನಕ್ಷೆಯಂತೆ ವಿನ್ಯಾಸವನ್ನು ಜಮೀನಿನಲ್ಲಿ ಅಭಿವೃದ್ಧಿ ಪಡಿಸಿದ ನಂತರವೇ ಅಂದರೆ ರಸ್ತೆಯ ನಿರ್ಮಾಣ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸೌಕರ್ಯ, ವಿದ್ಯುತ್ ವ್ಯವಸ್ಥೆ ಇತ್ಯಾದಿಗಳನ್ನು ನಿರ್ಮಿಸಿದ ನಂತರ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆ, ತೋಟಗಾರಿಕೆ ಇಲಾಖೆ, ಬೆಂಗಳೂರು ವಿದ್ಯುತ್ ಸರಬರಾಜು ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆಯಿಂದ ಕಾಮಗಾರಿ ಸಮರ್ಪಕವಾಗಿ ನಿರ್ವಹಿಸಿ ಪೂರ್ಣ ಗೊಳಿಸಿರುವ ಬಗ್ಗೆ ಮುಕ್ತಾಯ ಪ್ರಮಾಣ ಪತ್ರ ಪಡೆದು ಈ ಪ್ರಾಧಿಕಾರದ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು ಮತ್ತು ಸದರೀ ವಿನ್ಯಾಸದಲ್ಲಿ

ನೀರಿನ ಸೌಲಭ್ಯ ಹಾಗೂ ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿ ಅಳವಡಿಸಿರುವ ಬಗ್ಗೆ ಖಾಸಗಿ ಪರಿಸರ ತಜ್ಞರಿಂದ/ಅಭಿಯಂತರರಿಂದ ಪ್ರಮಾಣ ಪತ್ರ ಪಡೆದು ಈ ಕಛೇರಿಗೆ ಸಲ್ಲಿಸತಕ್ಕದ್ದು ಮತ್ತು ಉಳಿಕೆ ಶೇ.40 ನಿವೇಶನಗಳನ್ನು ಅಂದರೆ 21 ಸಂಖ್ಯೆ ನಿವೇಶನಗಳನ್ನು ಬಿಡುಗಡೆ ಮಾಡಲು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ ಪ್ರಾಧಿಕಾರದಿಂದ ವಿನ್ಯಾಸಕ್ಕೆ ಅಂತಿಮ ಅನುಮೋದನೆ ಪಡೆಯತಕ್ಕದ್ದು.

3. ವಿನ್ಯಾಸ ಪ್ರದೇಶವನ್ನು ಈ ಪ್ರಾಧಿಕಾರದ ಅನುಮೋದನೆ ನೀಡಿದ 24 ತಿಂಗಳ ಒಳಗಾಗಿ ಸಂಪೂರ್ಣವಾಗಿ (ಉದ್ಯಾನವನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕ) ಅಭಿವೃದ್ಧಿ ಪಡಿಸತಕ್ಕದ್ದು, ತಪ್ಪಿದಲ್ಲಿ ಈ ಅನುಮೋದನೆಯು ಯಾವ ಸೂಚನೆಯೂ ಇಲ್ಲದೆ ತಂತಾನೆ ರದ್ದಾಗುತ್ತದೆ.
4. ಪ್ರಸ್ತಾವಿತ ವಿನ್ಯಾಸದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯಲ್ಲಿ ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟ್ ಅನ್ನು ಸ್ಥಾಪಿಸಬೇಕು.
5. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ವಿಧಿಸುವ ಷರತ್ತುಗಳನ್ನು ತಪ್ಪದೇ ಅನುಸರಿಸತಕ್ಕದ್ದು.
6. ವಿನ್ಯಾಸವನ್ನು ಕಾರ್ಯಗತಗೊಳಿಸುವ ಮೊದಲು ಕರ್ನಾಟಕ ಗ್ರಾಮ ಪಂಚಾಯತಿ ಕಾಯ್ದೆಯಡಿ ಮುತ್ಸಂದ್ರ ಗ್ರಾಮಪಂಚಾಯಿತಿಯಿಂದ ಪರವಾನಗಿ ಪಡೆಯತಕ್ಕದ್ದು.
7. ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
8. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹಾಗೂ ಉಧ್ಯಾನವನಗಳಲ್ಲಿ ಹೊಸ ಸಸ್ಯಗಳನ್ನು ಬೆಳೆಸುವುದು.
9. ಅನುಮೋದಿತ ವಿನ್ಯಾಸದಲ್ಲಿ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
10. ಅನುಮೋದಿತ ವಿನ್ಯಾಸದಲ್ಲಿರುವ ರಸ್ತೆಗಳು, ಉಧ್ಯಾನವನವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಈ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು ಹಾಗೂ ಸಾರ್ವಜನಿಕ ಸೌಲಭ್ಯಕ್ಕೆ ಕಾಯ್ದಿರಿಸಿರುವ ಪ್ರದೇಶಗಳನ್ನು ಒತ್ತುವರಿಯಾಗದಂತೆ ಬೇಲಿಯನ್ನು ಅಳವಡಿಸಿ ಸಂರಕ್ಷಿಸತಕ್ಕದ್ದು.
11. ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಈ ಕೆಳಗಿನ ಮತ್ತು ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.
12. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
13. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.
14. ಸದರೀ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
15. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನೇ ರದ್ದುಗೊಳ್ಳುತ್ತದೆ.
16. ಈ ವಿನ್ಯಾಸದಲ್ಲಿ ಬರುವ ನಿವೇಶನಗಳ ಮಾರಾಟ ಸಂಬಂಧ ನೀಡುವ ಪ್ರಚಾರದಲ್ಲಿ ಪ್ರಾಧಿಕಾರದಿಂದ ಅನುಮೋದನೆ ಆಗಿರುವ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
17. ಸದರೀ ವಿನ್ಯಾಸದ ಅನುಮೋದನೆ ಸಂದರ್ಭದಲ್ಲಿ ವರ್ತೂರಿನಿಂದ ಕೋಟೂರು ಗ್ರಾಮಕ್ಕೆ ಹೋಗುವ ಗ್ರಾಮ ರಸ್ತೆಯ ಅಗಲೀಕರಣಕ್ಕಾಗಿ ಕಾಯ್ದಿರಿಸಲಾಗಿರುವ ಪ್ರದೇಶವನ್ನು ಪರಿತ್ಯಾಜನ ಪತ್ರದ ಮೂಲಕ ಹೊಸಕೋಟೆ ಯೋಜನಾ ಪ್ರಾಧಿಕಾರದ ಹೆಸರಿಗೆ ಪುಕ್ಕಟೆಯಾಗಿ ನೋಂದಾಯಿಸಿಕೊಡಲಾಗಿದ್ದು ಸದರೀ ರಸ್ತೆ ಅಗಲೀಕರಣಕ್ಕಾಗಿ ಕಾಯ್ದಿರಿಸಲಾದ ಜಮೀನು ಸಾರ್ವಜನಿಕ ಸ್ವತ್ತಾಗಿರುತ್ತದೆ. ಆದ್ದರಿಂದ, ಸದರೀ ಪ್ರದೇಶದ ಮೇಲೆ ವಿನ್ಯಾಸದ ಮಾಲೀಕರಿಗೆ/ಅರ್ಜಿದಾರರಿಗೆ/ಭೂ-ಮಾಲೀಕರಿಗೆ ಯಾವುದೇ ಅಧಿಕಾರ ಇರುವುದಿಲ್ಲ. ಆದ್ದರಿಂದ, ಸದರೀ ಸ್ವತ್ತಿಗೆ ಇತರೆ ಯಾವುದೇ ಸರ್ಕಾರಿ ಇಲಾಖೆಗಳಿಂದ ನಗದಾಗಲೀ ಅಥವಾ ಯಾವುದೇ ಫಲಾಪೇಕ್ಷೆಯಾಗಲೀ ಪಡೆಯಲು ಅರ್ಹರಾಗಿರುವುದಿಲ್ಲ.

ದೂರವಾಣಿ/ಫ್ಯಾಕ್ಸ್: 080-2793 4470
URL: www.hoskote-pa.in

# ಹೊಸಕೋಟೆ ಯೋಜನಾ ಪ್ರಾಧಿಕಾರ

ನಂ. 2241, ಶ್ರೀ ಜಯಚಾಮರಾಜೇಂದ್ರ ವೃತ್ತ, ಕೆ.ಆರ್. ರಸ್ತೆ, ಹೊಸಕೋಟೆ-562 114, ಬೆಂಗಳೂರು (ಗ್ರಾ) ಜಿಲ್ಲೆ.

18. ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಚಾರಿ ಮಾರ್ಗವನ್ನು (Paved Foot path) ನಿರ್ಮಿಸುವುದು.
19. ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ವಿಧಿ 17(4) ರಂತೆ ಕ್ರಮಕೈಗೊಳ್ಳಲು ಪ್ರಾಧಿಕಾರಕ್ಕೆ ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.
20. ನೈಸರ್ಗಿಕವಾಗಿ ಹರಿಯುವ ನದಿ/ ಹಳ್ಳ /ಕೆರೆ ಮುಂತಾದವುಗಳಿಗೆ ವಿನ್ಯಾಸದ ಯಾವುದೇ ಮಲೀನ ನೀರನ್ನು ಬಿಡಬಾರದು.
21. ಸರ್ಕಾರದ ನಿರ್ದೇಶನದ ಮೇರೆಗೆ ಇನ್ನಾವುದೇ ಶುಲ್ಕಗಳನ್ನು ತುಂಬಲು ಪ್ರಾಧಿಕಾರವು ಸೂಚನೆ ನೀಡಿದಲ್ಲಿ ಅರ್ಜಿದಾರರು ಅಂತಹ ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವತಿಸತಕ್ಕದ್ದು.
22. ಪ್ರಾಧಿಕಾರವು ವಿಧಿಸುವ ಇನ್ನಾವುದೇ ಷರತ್ತುಗಳಿಗೆ ಬದ್ಧವಾಗಿರತಕ್ಕದ್ದು.
23. ಅರ್ಜಿದಾರರ ಮನವಿಯಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ನ.ಅ.ಇ.112 ಬೆಂರೂಪ್ರಾ 2005 ದಿನಾಂಕ: 26.05.2005 ರಲ್ಲಿನ ಮಾರ್ಗ ಸೂಚಿಯಂತೆ ಈ ಕೆಳಕಂಡ 31 ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡಲಾಗಿದೆ.

| ಕ್ರ. ಸಂ | ವಿಸ್ತೀರ್ಣ | ನಿವೇಶನ ಸಂಖ್ಯೆ | ಒಟ್ಟು |
|---|---|---|---|
| 1. | 9.14X12.19ಮೀ | 19, 20, 25, 27, 28, 34, 35, 36, 39, 40, 43, 44, 47, 48, 49...................... | 15 |
| 2. | 9.00X15.00ಮೀ | 1, 2, 3, 4, 5, 6, 7, 8, 9, 10, 11, 12, 13, 14, 15, 16...................................... | 16 |
| | | ಒಟ್ಟು | 31 |

(ಒಟ್ಟು ಮೂವತ್ತೊಂದು ನಿವೇಶನಗಳು ಮಾತ್ರ)

ಸ.ನ. - [signature] 26/4/12.

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
(ಪ್ರ) ಹೊಸಕೋಟೆ.

ಪ್ರತಿ: 1. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿಗಳು, ಮುತ್ಸಂದ್ರ ಗ್ರಾಮ ಪಂಚಾಯಿತಿ, ಅನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು ಇವರಿಗೆ ವಿನ್ಯಾಸದ ನಾಲ್ಕು ಪ್ರತಿಗಳೊಂದಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

2. ಉಪನೋಂದಣಾಧಿಕಾರಿಗಳು, ಹೊಸಕೋಟೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562114, ಇವರಿಗೆ ಒಂದು ವಿನ್ಯಾಸದ ನಕ್ಷೆಯೊಂದಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

3. ಶ್ರೀ ಪಿ. ನಾರಾಯಣರೆಡ್ಡಿ ಬಿನ್ ಪಿಳ್ಳಪ್ಪ, ಕೋಟೂರು, ಮುತ್ಸಂದ್ರ ಅಂಚೆ, ಅನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

(5)

ಹೊಸಕೋಟೆ ಯೋಜನಾ ಪ್ರಾಧಿಕಾರ
1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ,
ಮಿಷನ್ ಆಸ್ಪತ್ರೆ ರಸ್ತೆ, ಹೊಸಕೋಟೆ-562114
ಬೆಂಗಳೂರು (ಗ್ರಾ) ಜಿಲ್ಲೆ.

## ನಿವೇಶನಗಳ ಬಿಡುಗಡೆ ಪ್ರಮಾಣ ಪತ್ರ-2

ಸಂಖ್ಯೆ:ಹೊಯೋಪ್ರಾ/ಎಲ್.ಎ.ಓ/19/2011-12

ದಿನಾಂಕ: 06/06/2017

ವಿಷಯ: ಹೊಸಕೋಟೆ ತಾಲ್ಲೂಕು ಅನುಗೊಂಡನಹಳ್ಳಿ ಹೋಬಳಿ,ಕೋಟೂರುಗ್ರಾಮದ ಸ.ನಂ ಸ.ನಂ 61/•/1 ರಲ್ಲಿನ 3 ಎಕರೆ 4.0.00 ಗುಂಟೆ ಒಟ್ಟು3 ಎಕರೆ 4.0.00 ಗುಂಟೆ ವಿನ್ಯಾಸದಲ್ಲಿನ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1. ಅರ್ಜಿದಾರರ ಮನವಿ ದಿನಾಂಕ:03/02/2012

2. ದಿನಾಂಕ: 29/03/2012 ರ ಪ್ರಾಧಿಕಾರದ 41 ನೇ ಸಭೆಯ ವಿಷಯ ಸಂಖ್ಯೆ.5

3. ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಸತಿ ವಿನ್ಯಾಸ ದಿನಾಂಕ:26/04/2012

4. ಪ್ರಾಧಿಕಾರ ಆದೇಶ ಸಂಖ್ಯೆ :HPA/LAO/19/2011-12

5. ಅರ್ಜಿದಾರರು ಬರೆದುಕೊಟ್ಟಿರುವ ನೋಂದಾಯಿತ ಪರಿತ್ಯಾಜನ ಪತ್ರ ದಿನಾಂಕ: 21/04/2012

6.ನಿವೇಶನಗಳ ಬಿಡುಗಡೆ ಪ್ರಮಾಣ ಪತ್ರ-01 ಸಂಖ್ಯೆ : ಹೊಯೋಪ್ರಾ/ಎಲ್.ಎ.ಓ/19/2011-12, ದಿ:26/04/2012

******************************

ಹೊಸಕೋಟೆ ತಾಲ್ಲೂಕು,ಅನುಗೊಂಡನಹಳ್ಳಿ ಹೋಬಳಿ,ಕೋಟೂರು ಗ್ರಾಮದ ಸ.ನಂ ಸ.ನಂ 61/•/1 ರಲ್ಲಿನ 3 ಎಕರೆ 4.0.00 ಗುಂಟೆ ಒಟ್ಟು 3 ಎಕರೆ 4.0.00 ಗುಂಟೆ ವಿಸ್ತೀರ್ಣ ಪ್ರದೇಶದ ಬಹು ನಿವೇಶನ ವಸತಿ ವಿನ್ಯಾಸ ನಕ್ಷೆಗೆ ಯೋಜನಾ ಪ್ರಾಧಿಕಾರದ ಪತ್ರ ಸಂಖ್ಯೆ: HPA/LAO/19/2011-12 ದಿನಾಂಕ: 26/04/2012 ರಲ್ಲಿ ಅನುಮೋದನೆಯನ್ನು ನೀಡಲಾಗಿದೆ. ಈ ವಿನ್ಯಾಸದಲ್ಲಿ ಒಟ್ಟು 52 ವಿವಿಧ ಅಳತೆಯ ನಿವೇಶನಗಳಿದ್ದು, ಉಲ್ಲೇಖ (3) ರ ಪ್ರಮಾಣ ಪತ್ರದಲ್ಲಿ ಶೇ.60 ರಷ್ಟು ನಿವೇಶನಗಳನ್ನು ಪ್ರಾರಂಭಿಕ ಹಂತದಲ್ಲಿ ಬಿಡುಗಡೆ ಮಾಡಲಾಗಿದ್ದು, ಅರ್ಜಿದಾರರು ಒಳಚರಂಡಿ ವ್ಯವಸ್ಥೆ, ನೀರು ಸರಬರಾಜು ಪೈಪುಗಳ ಜಾಲ, ವಿದ್ಯುಚ್ಛಕ್ತಿ ಸಂಪರ್ಕ,ರಸ್ತೆ, CD Works, side drains ಕಾಮಗಾರಿಗಳನ್ನು ಅಭಿವೃದ್ಧಿಪಡಿಸಿ, ಸದರಿ ಅನುಮೋದಿತ ವಸತಿ ವಿನ್ಯಾಸ ನಕ್ಷೆಯಲ್ಲಿನ ಒಟ್ಟು 52 ನಿವೇಶನಗಳ ಪೈಕಿ ಶೇ. 40 ರಷ್ಟು ( 21 ) ನಿವೇಶನಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಹಾಗಾಗಿ, ಸರ್ಕಾರದ ಸುತ್ತೋಲೆ ಸಂಖ್ಯೆ ನ ಅ ಇ 115 ಬೆಂರೂಪ್ರಾ 2005 ದಿನಾಂಕ:26/05/2005 ರನ್ವಯ, ಸದರಿ ಅನುಮೋದಿತ ವಸತಿ ವಿನ್ಯಾಸದಲ್ಲಿರುವ ಒಟ್ಟು 52 ನಿವೇಶನಗಳ ಪೈಕಿ ಶೇ. 40 ರಷ್ಟು ( 21 ) ನಿವೇಶನಗಳನ್ನು ಈ ಕೆಳಗಿನಂತೆ ಎಲ್ಲಾ ಸಿವಿಲ್ ಕಾಮಗಾರಿಗಳು ಅಂದರೆ ರಸ್ತೆ ಡಾಂಬರೀಕರಣ, ನೀರು ಸರಬರಾಜು, ವಿದ್ಯುಚ್ಛಕ್ತಿ ಸಂಪರ್ಕ, ಮಳೆ ನೀರು ಸಂಗ್ರಹಣೆ, ಪಾರ್ಕ್ ಅಭಿವೃದ್ಧಿ, ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಹಾಗೂ ರಸ್ತೆಗಳ ಅಕ್ಕ-ಪಕ್ಕದಲ್ಲಿ ಗಿಡ-ಮರಗಳನ್ನು ಸೇರಿದಂತೆ ಸಂಪೂರ್ಣವಾಗಿ ಅಭಿವೃದ್ಧಿಪಡಿಸಲಾಗಿರುವ ಹಿನ್ನಲೆಯಲ್ಲಿ ಉಳಿಕೆ ಶೇ.40 ರಷ್ಟು(21)ನಿವೇಶನಗಳನ್ನು ನೋಂದಣಿ ಮಾಡ ಲು ಬಿಡುಗಡೆ ಮಾಡಲಾಗಿದೆ.

| ಕ್ರ. ಸಂ. | ಅಳತೆ | ನಿವೇಶನಗಳ ಸಂಖ್ಯೆ | ಒಟ್ಟು |
|---|---|---|---|
| 1 | 9.14 X 12.19 | 21,22,26,31,32,33,41,42 | 8 |
| 2 | ಅನಿಯತ(ನಕ್ಷೆಯಲ್ಲಿರುವ ಅಳತೆಯಂತೆ) | 50,51,17,18,23,24,29,30,37,38,45,46,52 | 13 |
| | | ಒಟ್ಟು | 21 |

Member Secretary/ಸದಸ್ಯ-ಕಾರ್ಯದರ್ಶಿ
Hoskote Planning Authority
ಹೊಸಕೋಟೆ ಯೋಜನಾ ಪ್ರಾಧಿಕಾರ

ಪ್ರತಿಯನ್ನು:

1. ~~ಆಯುಕ್ತರು/ನಗರ ಸಭೆ/ಮುಖ್ಯಾಧಿಕಾರಿಗಳು ಪುರ ಸಭೆ/~~ಪಂಚಾಯಿತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ, ಮುಗ್ಬಂರ ಗ್ರಾಮ ಪಂಚಾಯಿತಿ,ಅನುಗೊಂಡನಹಳ್ಳಿ ಹೋಬಳಿ,ಹೊಸಕೋಟೆ ತಾಲ್ಲೂಕು ಇವರಿಗೆ ಅನುಮೋದಿತ ವಸತಿ ವಿನ್ಯಾಸ ನಕ್ಷೆಯ ಎರಡು ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ, ಪ್ರಾಧಿಕಾರದಿಂದ ಅಂತಿಮವಾಗಿ ಬಿಡುಗಡೆ ಮಾಡಿರುವ ನಿವೇಶನಗಳನ್ನು ಮಾತ್ರ ಖಾತಾ ಮಾಡುವಂತೆ ಸೂಚಿಸಲಾಗಿದೆ

2. ಉಪನೋಂದಣಾಧಿಕಾರಿಗಳು,ಹೊಸಕೋಟೆ ತಾಲ್ಲೂಕು ಇವರಿಗೆ ಅನುಮೋದಿತ ವಸತಿ ವಿನ್ಯಾಸ ನಕ್ಷೆಯ ಎರಡು ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ, ಪ್ರಾಧಿಕಾರದಿಂದ ಅಂತಿಮವಾಗಿ ಬಿಡುಗಡೆ ಮಾಡಲಾದ ನಿವೇಶನಗಳನ್ನು ನೋಂದಣಿ ಮಾಡಬಹುದಾಗಿರುತ್ತದೆ .

3. ಅರ್ಜಿದಾರರಾದ ನಾರಾಯಣರೆಡ್ಡಿ ಬಿನ್ ಪಿಳ್ಳಪ್ಪ ಮತ್ತು ಇತರರು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ .